**ಕರ್ನಾಟಕ ಸರ್ಕಾರ**
**ಆರ್ಥಿಕ ಇಲಾಖೆ**

ಸಂಖ್ಯೆ.ಆಇ 13 ಬಿಪಿಇ 2018

ಕರ್ನಾಟಕ ಸರ್ಕಾರ ಸಚಿವಾಲಯ,
ಕೊಠಡಿ ಸಂಖ್ಯೆ:257, 2ನೇ ಮಹಡಿ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:10–12–2018.

# <u>ಸುತ್ತೋಲೆ</u>

**ವಿಷಯ:– ಮಹಿಳಾ ಉದ್ದೇಶಿತ ಆಯವ್ಯಯ 2019–2020**

******

2006–07ರ ಆಯವ್ಯಯ ಭಾಷಣದ ಕಂಡಿಕೆ 25ರಲ್ಲಿ ಆಗಿನ ಮಾನ್ಯ ವಿತ್ತ ಮಂತ್ರಿಗಳು ಮಹಿಳಾ ಉದ್ದೇಶಿತ ಆಯವ್ಯಯ ಕುರಿತು 'ಲಿಂಗ ಆಧಾರಿತ (ಜೆಂಡರ್ ಬೇಸಡ್) ಆಯವ್ಯಯವು ಮಹಿಳೆಯರ ಆದ್ಯತೆಯನ್ನು ಗುರುತಿಸಲು ನೆರವಾಗುವುದರ ಜೊತೆಗೆ ಸಾರ್ವಜನಿಕ ವೆಚ್ಚಗಳಲ್ಲಿ ಮಹಿಳೆಯರ ಬಗ್ಗೆ ಸರ್ಕಾರದ ಕಾಳಜಿಯನ್ನು ಬಿಂಬಿಸಲು ಶಕ್ತವಾಗುತ್ತದೆ. ಇದಕ್ಕೆ ವಿಶೇಷ ಗಮನ ನೀಡಲು ಹಣಕಾಸು ಇಲಾಖೆಯಲ್ಲಿ ಲಿಂಗ ಆಧಾರಿತ ಆಯವ್ಯಯ ಕೋಶವನ್ನು ಸ್ಥಾಪಿಸಲಾಗುವುದು. ಈ ಕೋಶವು ಆಯವ್ಯಯದಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಸಂಪನ್ಮೂಲಗಳ ಗಾತ್ರ, ಹಂಚಿಕೆ ಮತ್ತು ವೆಚ್ಚ ಹಾಗೂ ನೀತಿಗಳ ಸೂಕ್ತ ಅಳವಡಿಕೆಯನ್ನು ಗುರುತಿಸುತ್ತದೆ' ಎಂದು ಘೋಷಿಸಿರುವುದನ್ನು ಗಮನಿಸುವುದು.

2. ಅದರಂತೆ 'ಜೆಂಡರ್ ಬಜೆಟ್ ಸೆಲ್'ಅನ್ನು ಸರ್ಕಾರಿ ಆದೇಶ ಸಂಖ್ಯೆ. ಆಇ 21 ಜಿಐಇ 2005, ಬೆಂಗಳೂರು, ದಿನಾಂಕ 29 ಜನವರಿ 2007ರನ್ವಯ ಆರ್ಥಿಕ ಇಲಾಖೆಯಲ್ಲಿ ಸ್ಥಾಪಿಸಲಾಗಿದೆ. ಮಹಿಳಾ ಉದ್ದೇಶಿತ ಆಯವ್ಯಯವನ್ನು 2007–08ರಿಂದ ಸಿದ್ಧಪಡಿಸಲಾಗುತ್ತಿದ್ದು, ಇತರೆ ಆಯವ್ಯಯದ ಸಂಪುಟಗಳೊಂದಿಗೆ ವಿಧಾನಮಂಡಲದಲ್ಲಿ ಮಂಡಿಸಲಾಗುತ್ತಿದೆ. 2018–2019 (ಜುಲೈ) ನೇ ಸಾಲಿನ ಮಹಿಳಾ ಉದ್ದೇಶಿತ ಆಯವ್ಯಯವನ್ನು, ಆರ್ಥಿಕ ಇಲಾಖೆಯ ವೆಬ್‌ಸೈಟ್ ಯುಆರ್‌ಎಲ್ http://finance.kar.nic.in/bud2018july/2018julydocs/17-GenderBudget%20Final%20Doc.pdf ರಲ್ಲಿಯೂ ಸಹ ಪ್ರಚುರ ಪಡಿಸಲಾಗಿದೆ.

3. ಇಲಾಖೆಯು, ಆಯವ್ಯಯದಿಂದ ಪಾವತಿಸುತ್ತಿರುವ ವೇತನಕ್ಕೆ ಸಂಬಂದಿಸಿದಂತೆ ಒಟ್ಟು ಸಿಬ್ಬಂದಿಗಳ ಸಂಖ್ಯೆ ಮತ್ತು ಮಹಿಳಾ ಸಿಬ್ಬಂದಿಗಳ ಸಂಖ್ಯೆಯನ್ನು ನೀಡುವುದು. ಹೊರ ಗುತ್ತಿಗೆ ಹಾಗೂ ಗುತ್ತಿಗೆ ಆಧಾರದಲ್ಲಿ ಮತ್ತು ಸಮಾಲೋಚನೆಗಾಗಿ ಮಹಿಳೆಯರಿಗೆ ಪಾವತಿಸುತ್ತಿರುವ ವೇತನ, ದಿನಗೂಲಿ ಮೊತ್ತ, ಗೌರವಧನ ಮತ್ತು ಸಮಾಲೋಚನಾ ಶುಲ್ಕದ ವಿವರಗಳನ್ನು ಪ್ರತ್ಯೇಕವಾಗಿ ನೀಡುವುದು. ಸದರಿ ಮಾಹಿತಿಯನ್ನು ಇಲಾಖೆಯಡಿಯಲ್ಲಿ ಇರುವ ನಿಗಮ, ಮಂಡಳಿಗಳು ಮತ್ತು ಸಂಘಗಳಿಗೆ (ಸೊಸೈಟಿ) ಸಹ ಕೋಡ್ರೀಕರಿಸಿ ನೀಡುವುದು.

4. ಇದರೊಂದಿಗೆ, 2017–18ನೇ ಸಾಲಿನಲ್ಲಿ ಮಹಿಳಾ ಉದ್ದೇಶಿತ ಆಯವ್ಯಯವನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಸದರಿ ದಾಖಲೆಯ ಪ್ರತಿಯೊಂದು ಬೇಡಿಕೆಗಳಡಿಯಲ್ಲಿ ಸೂಚಿಸಿರುವಂತೆ, ವರ್ಗ 'ಎ'ಯಡಿಯಲ್ಲಿರುವ ಕಾರ್ಯಕ್ರಮಗಳಿಗೆ (ಸ್ಕೀಮ್) ಒಂದು ಸಂಕ್ಷಿಪ್ತ ವಿವರಣೆಯನ್ನು ನೀಡಲಾಗಿದೆ. ವರ್ಗ 'ಬಿ'ಯಡಿಯಲ್ಲಿ ವಿವಿಧ ಇಲಾಖೆಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ಅಯ್ದ ಹದಿನೆಂಟು ಯೋಜನೆಗಳಿಗೆ ಸಂಕ್ಷಿಪ್ತ ವಿವರಣೆಯನ್ನು 2018–19ನೇ ಸಾಲಿನಿಂದ ಪ್ರಾರಂಭಿಸಲಾಗಿದೆ. ಅದಲ್ಲದೆ, ಕೆಎಂಎವೈ ಯೋಜನೆಗಳ ಪ್ರಗತಿಯನ್ನು ಇಲಾಖಾವಾರು (ಡಿಸೆಂಬರ್, 2017 ರವರೆಗೆ) ವಿವರಣೆಯನ್ನು ನೀಡಲಾಗಿದೆ. ಮತ್ತು ಇದಕ್ಕಾಗಿ, ಅನುಬಂಧದಲ್ಲಿ ನಿಗದಿತ ನಮೂನೆಯನ್ನು[1] ನೀಡಲಾಗಿದೆ. ಸಂಬಂಧಪಟ್ಟ ಆಡಳಿತ ಇಲಾಖೆಗಳು, 2018–19ನೇ ಸಾಲಿನ ಮಹಿಳಾ ಉದ್ದೇಶಿತ ಆಯವ್ಯಯ ಸಂಪುಟದಲ್ಲಿನ ವರ್ಗ 'ಎ' ಹಾಗೂ ವರ್ಗ 'ಬಿ'ಯಡಿಯಲ್ಲಿನ ಎಲ್ಲಾ ಯೋಜನೆಗಳಿಗೆ ಹಾಗೂ ವರ್ಗ 'ಸಿ'ಯಡಿಯಲ್ಲಿನ ಯೋಜನೆಗಳಿಗೆ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಒದಗಿಸುವುದು.

---

[1] ನಿಗದಿತ ನಮೂನೆಯನ್ನು ಮೂರು ಭಾಗಗಳಲ್ಲಿ ಭರ್ತಿ ಮಾಡುವುದು; ವರ್ಗ 'ಎ' – ಶೇಕಡ 100ರಷ್ಟು ಮಹಿಳಾ ಫಲಾನುಭವಿಗಳನ್ನು ಹೊಂದಿರುವ ಕಾರ್ಯಕ್ರಮಗಳು, ವರ್ಗ 'ಬಿ' – ಶೇಕಡ 30 ರಿಂದ 99ರಷ್ಟು ಮಹಿಳಾ ಫಲಾನುಭವಿಗಳನ್ನು ಹೊಂದಿರುವ ಕಾರ್ಯಕ್ರಮಗಳು ಹಾಗೂ ವರ್ಗ 'ಸಿ' – ಶೇಕಡ 30 ಕ್ಕಿಂತ ಕಡಿಮೆ ಮಹಿಳಾ ಫಲಾನುಭವಿಗಳನ್ನು ಹೊಂದಿರುವ ಕಾರ್ಯಕ್ರಮಗಳು.

ಸೂಚಿಸಿರುವ ಯೋಜನೆಗಳನ್ನು ಈ ನಮೂನೆಯಲ್ಲಿ 2017–18ನೇ & 2017–18ನೇ ಸಾಲಿನ ಡಿಸೆಂಬರ್‌ವರೆಗೆ ಪ್ರತಿಯೊಂದು ಕಾರ್ಯಕ್ರಮಗಳ ವಿವರಗಳನ್ನು ಒದಗಿಸತಕ್ಕದ್ದು. ಪ್ರತಿ ಕಾರ್ಯಕ್ರಮದಡಿಯಲ್ಲಿ ಇರುವ ಮಹಿಳೆ ಮತ್ತು ಪುರುಷ ಫಲಾನುಭವಿಗಳ ಸಂಖ್ಯೆಯನ್ನು ನಿಗದಿತ ನಮೂನೆಯಲ್ಲಿ ಒದಗಿಸುವುದು. ಭರ್ತಿ ಮಾಡಿದ ನಮೂನೆಗಳನ್ನು ಡಿಸೆಂಬರ್ 22, 2018ರ ಒಳಗೆ, ನಿರ್ದೇಶಕರು, ವಿತ್ತೀಯ ಕಾರ್ಯನೀತಿ ಸಂಸ್ಥೆ, ಬೆಂಗಳೂರು–ಮೈಸೂರು ರಸ್ತೆ, ಕೆಂಗೇರಿ ಅಂಚೆ, ಕೆಂಗೇರಿ ಬೆಂಗಳೂರು – 560 060 ಇಲ್ಲಿಗೆ ಅಥವಾ director@fpibangalore.gov.in ಇ–ಮೇಲ್ ಐಡಿಗೆ ಕಳುಹಿಸುವುದು. ಈ ಕುರಿತು, ಸಂಪರ್ಕಾಧಿಕಾರಿ ಶ್ರೀಮತಿ ನೆಲ್ಲೇರಿ ಉಮೇಶ್ವರಿ, ವಿಶೇಷಾಧಿಕಾರಿಗಳು (ದೂರವಾಣಿ ಸಂಖ್ಯೆ: 080–2697–1000), ವಿತ್ತೀಯ ಕಾರ್ಯನೀತಿ ಸಂಸ್ಥೆ.

5. ಈ ನಮೂನೆಯು ಎರಡು ಉದ್ದೇಶಗಳನ್ನು ಹೊಂದಿರುತ್ತದೆ (ಅ) 2018–19ನೇ ಸಾಲಿನ ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಯಲ್ಲಿ ಪ್ರಚುರ ಪಡಿಸಿರುವಂತೆ ವರ್ಗ 'ಎ' ಹಾಗೂ ವರ್ಗ 'ಬಿ'ಯಲ್ಲಿನ ವರ್ಗೀಕರಣವನ್ನು ಸ್ಥಿರೀಕರಿಸುವುದು ಮತ್ತು (ಆ) 2019–20ನೇ ಸಾಲಿನ ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ವರ್ಗ 'ಎ'ಯಡಿಯಲ್ಲಿನ ಪ್ರತಿ ಕಾರ್ಯಕ್ರಮದ ಕುರಿತು ಮತ್ತು ವರ್ಗ 'ಬಿ'ಯಲ್ಲಿನ ನೇರ ಫಲಾನುಭವಿಗಳ ಕಾರ್ಯಕ್ರಮಗಳ ಕುರಿತು ಸಂಕ್ಷಿಪ್ತ ವಿವರಣೆಯನ್ನು ನೀಡುವುದು.

6. 2018–19ನೇ ಸಾಲಿನ ವರ್ಗ 'ಎ' ಹಾಗೂ ವರ್ಗ 'ಬಿ' ಕಾರ್ಯಕ್ರಮಗಳು ಆರ್ಥಿಕ ಇಲಾಖೆಯ ವೆಬ್‌ಸೈಟ್ http://finance.kar.nic.in/bud2018july/2018julydocs/17-GenderBudget%20Final%20Doc.pdfನಲ್ಲಿ ಲಭ್ಯವಿರುತ್ತದೆ.

**ಈ ಸುತ್ತೋಲೆಯ ಕಂಡಿಕೆ 3ರಲ್ಲಿ ಕೇಳಿರುವ ಅಗತ್ಯವಿರುವ ಹೆಚ್ಚುವರಿ ಮಾಹಿತಿಗೆ ತಮ್ಮ ಗಮನವನ್ನು ಸೆಳೆದಿದೆ.**

(ಅನಿಲ್ ಕುಮಾರ್ ಝಾ)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆ&ಸಂ)
ಆರ್ಥಿಕ ಇಲಾಖೆ

<u>ಇವರಿಗೆ:–</u>

1) ಪ್ರಧಾನ ಮಹಾಲೇಖಪಾಲರು (ಎ & ಇ)/(ಜಿ & ಎಸ್‌ಎಸ್‌ಎ)/(ಇ & ಎಸ್‌ಎಸ್‌ಎ), ಕರ್ನಾಟಕ, ಬೆಂಗಳೂರು
2) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು.
3) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
4) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5) ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.
6) ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
7) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.
8) ಆರ್ಥಿಕ ಇಲಾಖೆಯ ಎಲ್ಲಾ ಅಪರ ಕಾರ್ಯದರ್ಶಿಗಳು/ಜಂಟಿ ಕಾರ್ಯದರ್ಶಿಗಳು/ ಉಪ ಕಾರ್ಯದರ್ಶಿಗಳು/ಅಧೀನ ಕಾರ್ಯದರ್ಶಿಗಳು/ಶಾಖಾಧಿಕಾರಿಗಳು.
9) ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.
10) ಕಛೇರಿ ಪ್ರತಿ/ ಹೆಚ್ಚುವರಿ ಪ್ರತಿಗಳು.

# ಮಹಿಳಾ ಉದ್ದೇಶಿತ ಆಯವ್ಯಯ – 2019–20

ಇಲಾಖೆಯ ಹೆಸರು: ಅನುಬಂಧ

**ಭಾಗ – 1 ವರ್ಗ – 'ಎ' (ಶೇ. 100 ಅನುದಾನ ಮಹಿಳೆಯರಿಗಾಗಿ)**

| ಕ್ರ. ಸಂ. | ಲೆಕ್ಕ ಶೀರ್ಷಿಕೆ | ಯೋಜನೆಯ ಹೆಸರು | ವಲಯ ಕೇಂದ್ರ / ರಾಜ್ಯ / ಜಿಲ್ಲಾ | ಫಲಾನುಭವಿ/ಫಲಾನುಭವಿಗಳಲ್ಲದ ಯೋಜನೆಗಳು | ಯೋಜನೆ ಪ್ರಾರಂಭವಾದ ವರ್ಷ | ಯೋಜನೆಯ ಉದ್ದೇಶ/ಗಳು | ಆರ್ಥಿಕ – ಗುರಿ ಲಕ್ಷ ರೂಗಳಲ್ಲಿ | | ಆರ್ಥಿಕ – ಸಾಧನೆ ಲಕ್ಷ ರೂಗಳಲ್ಲಿ | | ಭೌತಿಕ – ಗುರಿ (ಸಂಖ್ಯೆ) | | ಭೌತಿಕ – ಸಾಧನೆ (ಸಂಖ್ಯೆ) | |
|---|---|---|---|---|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | | **9** | | **10** | | **11** | |
| | | | | | | | ಬಜೆಟ್ 2017–18 | ಬಜೆಟ್ 2018–19 | ಲೆಕ್ಕ 2017–18 | ಬಜೆಟ್ 2018–19 (ಡಿಸೆಂಬರ್‌ವರೆಗೆ) | 2017–18 | 2018–19 | 2017–18 | 2018–19 (ಡಿಸೆಂಬರ್‌ವರೆಗೆ) |
| | | | | | | | | | | | ಮ | ಮ | ಮ | ಮ |
| 1 | | | | | | | | | | | | | | |
| 2 | | | | | | | | | | | | | | |

**ಭಾಗ – 2 ವರ್ಗ – 'ಬಿ' (ಶೇ. 30 – 99 ರಷ್ಟು ಅನುದಾನ ಮಹಿಳೆಯರಿಗಾಗಿ)**

| ಕ್ರ. ಸಂ. | ಲೆಕ್ಕ ಶೀರ್ಷಿಕೆ | ಯೋಜನೆಯ ಹೆಸರು | ವಲಯ ಕೇಂದ್ರ / ರಾಜ್ಯ / ಜಿಲ್ಲಾ | ಫಲಾನುಭವಿ/ಫಲಾನುಭವಿಗಳಲ್ಲದ ಯೋಜನೆಗಳು | ಯೋಜನೆ ಪ್ರಾರಂಭವಾದ ವರ್ಷ | ಯೋಜನೆಯ ಉದ್ದೇಶ/ಗಳು | ಆರ್ಥಿಕ – ಗುರಿ ಲಕ್ಷ ರೂಗಳಲ್ಲಿ | | ಆರ್ಥಿಕ – ಸಾಧನೆ ಲಕ್ಷ ರೂಗಳಲ್ಲಿ | | ಭೌತಿಕ – ಗುರಿ (ಸಂಖ್ಯೆ) | | | | ಭೌತಿಕ – ಸಾಧನೆ (ಸಂಖ್ಯೆ) | | | |
|---|---|---|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | | 9 | | 10 | | | | 11 | | | |
| | | | | | | | ಬಜೆಟ್ 2017–18 | ಬಜೆಟ್ 2018–19 | ಲೆಕ್ಕ 2017–18 | ಬಜೆಟ್ 2018–19 (ಡಿಸೆಂಬರ್‌ವರೆಗೆ) | 2017–18 | | 2018–19 | | 2017–18 | | 2018–19 (ಡಿಸೆಂಬರ್‌ವರೆಗೆ) | |
| | | | | | | | | | | | ಪು | ಮ | ಪು | ಮ | ಪು | ಮ | ಪು | ಮ |
| 1 | | | | | | | | | | | | | | | | | | |
| 2 | | | | | | | | | | | | | | | | | | |

**ಭಾಗ – 3 ವರ್ಗ – 'ಸಿ' (ಶೇ. 30 ಕ್ಕಿಂತ ಕಡಿಮೆ ಅನುದಾನ)**

| ಕ್ರ. ಸಂ. | ಲೆಕ್ಕ ಶೀರ್ಷಿಕೆ | ಯೋಜನೆಯ ಹೆಸರು | ವಲಯ ಕೇಂದ್ರ / ರಾಜ್ಯ / ಜಿಲ್ಲಾ | ಫಲಾನುಭವಿ/ಫಲಾನುಭವಿಗಳಲ್ಲದ ಯೋಜನೆಗಳು | ಯೋಜನೆ ಪ್ರಾರಂಭವಾದ ವರ್ಷ | ಯೋಜನೆಯ ಉದ್ದೇಶ/ಗಳು | ಆರ್ಥಿಕ – ಗುರಿ ಲಕ್ಷ ರೂಗಳಲ್ಲಿ | | ಆರ್ಥಿಕ – ಸಾಧನೆ ಲಕ್ಷ ರೂಗಳಲ್ಲಿ | | ಭೌತಿಕ – ಗುರಿ (ಸಂಖ್ಯೆ) | | | | ಭೌತಿಕ – ಸಾಧನೆ (ಸಂಖ್ಯೆ) | | | |
|---|---|---|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | | 9 | | 10 | | | | 11 | | | |
| | | | | | | | ಬಜೆಟ್ 2017–18 | ಬಜೆಟ್ 2018–19 | ಲೆಕ್ಕ 2017–18 | ಬಜೆಟ್ 2018–19 (ಡಿಸೆಂಬರ್‌ವರೆಗೆ) | 2017–18 | | 2018–19 | | 2017–18 | | 2018–19 (ಡಿಸೆಂಬರ್‌ವರೆಗೆ) | |
| | | | | | | | | | | | ಪು | ಮ | ಪು | ಮ | ಪು | ಮ | ಪು | ಮ |
| 1 | | | | | | | | | | | | | | | | | | |
| 2 | | | | | | | | | | | | | | | | | | |

## ಮಹಿಳಾ ಉದ್ದೇಶಿತ ಆಯವ್ಯಯ – 2019–20

ಇಲಾಖೆಯ ಹೆಸರು: ಅನುಬಂಧ

**ಟಿಪ್ಪಣಿ: ನಮೂನೆಯನ್ನು ಭರ್ತಿ ಮಾಡಲು ಅನುಸರಿಸಬೇಕಾದ ಕ್ರಮ. ಈ ನಮೂನೆಯನ್ನು ಭರ್ತಿ ಮಾಡಲು, ಮಹಿಳಾ ಉದ್ದೇಶಿತ ಆಯವ್ಯಯ 2018–19 (ಜುಲೈ, 2018 ರಂದು ವಿಧಾನಮಂಡಲದಲ್ಲಿ ಮಂಡಿಸಿದಂತೆ) ರನ್ನು ಪರಿಗಣಿಸುವುದು. ಸೂಚಕಗಳೊಂದಿಗೆ ಜೋಡಿಸಲು ಅನುಕೂಲವಾಗುವಂತೆ ಯೋಜನೆಯ ಪ್ರಸ್ತಾವನೆಯ ಪ್ರತಿಯೊಂದನ್ನು ದಯವಿಟ್ಟು ನೀಡುವುದು.**

1. ಭಾಗ – 1, ಭಾಗ – 2 ಮತ್ತು ಭಾಗ – 3 ಗಳಲ್ಲಿ ಬೇಡಿಕೆಗಳಡಿಯಲ್ಲಿನ ಯೋಜನೆಗಳ ಕ್ರಮ ಸಂಖ್ಯೆಯನ್ನು ನಮೂದಿಸುವುದು.
2. ಲೆಕ್ಕ ಶೀರ್ಷಿಕೆಯನ್ನು ಸವಿವರ ಲೆಕ್ಕ ಶೀರ್ಷಿಕೆಯಲ್ಲಿ ನಮೂದಿಸಿರುವಂತೆಯೇ ನಮೂದಿಸುವುದು ಮತ್ತು ಅದೇ ಅನುಕ್ರಮದಲ್ಲಿ ನಮೂದಿಸುವುದು.
3. ಯೋಜನೆಯ ಹೆಸರನ್ನು ಸವಿವರ ಲೆಕ್ಕ ಶೀರ್ಷಿಕೆಯಲ್ಲಿ ನಮೂದಿಸಿರುವಂತೆಯೇ ನಮೂದಿಸುವುದು.
4. ಪ್ರತಿಯೊಂದು ಯೋಜನೆಯ ವಲಯವನ್ನು ಕೇಂದ್ರ / ರಾಜ್ಯ / ಜಿಲ್ಲಾ ಎಂದು ನಮೂದಿಸುವುದು.
5. ಯೋಜನೆಯು ಫಲಾನುಭವಿ/ಫಲಾನುಭವಿಗಳಲ್ಲದ ಯೋಜನೆಗಳು ಎಂದು ನಿಗದಿತ ಅನುಕ್ರಮದಲ್ಲಿ ನಮೂದಿಸುವುದು.
6. ಯೋಜನೆಯನ್ನು ಜಾರಿಗೊಳಿಸಿರುವ ವರ್ಷವನ್ನು ನಮೂದಿಸುವುದು.
7. ಯೋಜನೆಯ ಉದ್ದೇಶವನ್ನು ಯೋಜನೆಯ ಅನುಮೋದನೆಗಾಗಿ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಇರುವಂತೆ ನಮೂದಿಸುವುದು.
8. ಯೋಜನೆಯ ಶೀರ್ಷಿಕೆಗಳಡಿಯಲ್ಲಿ ಆರ್ಥಿಕ – ಗುರಿಯನ್ನು ಲಕ್ಷ ರೂಪಾಯಿಗಳಲ್ಲಿ ಎರಡು ವರ್ಷಗಳಿಗೆ ನಮೂದಿಸುವುದು.
9. ಯೋಜನೆಯ ಶೀರ್ಷಿಕೆಗಳಡಿಯಲ್ಲಿ ಆರ್ಥಿಕ – ಸಾಧನೆಯನ್ನು ಲಕ್ಷ ರೂಪಾಯಿಗಳಲ್ಲಿ ಎರಡು ವರ್ಷಗಳಿಗೆ ನಮೂದಿಸುವುದು.
10. ಯೋಜನೆಯ ಭೌತಿಕ – ಗುರಿಯನ್ನು ಯೋಜನೆಗೆ ಅನುಗುಣವಾಗಿ ನಿಖರ ಸಂಖ್ಯೆಗಳಲ್ಲಿ ಪುರುಷ ಮತ್ತು ಮಹಿಳಾ ಫಲಾನುಭವಿಗಳ ಸಂಖ್ಯೆಯನ್ನು ಎರಡು ವರ್ಷಗಳಿಗೆ ನಮೂದಿಸುವುದು. ಒಂದು ವೇಳೆ ಫಲಾನುಭವಿಗಳು ಪುರುಷ ಮತ್ತು ಮಹಿಳೆ ಅಲ್ಲದೇ ಯೋಜನೆಯಲ್ಲಿ ಇತರೆ ಯಾವುದೇ ಘಟಕವಾಗಿ ನಮೂದಿಸಿದ್ದರೆ, ಅದರಂತೆಯೇ ನಮೂದಿಸುವುದು. ಉದಾಹರಣೆಗೆ: ಮನೆಗಳ ಸಂಖ್ಯೆ / ನಿರ್ಮಾಣ ಮಾಡುವ ಕೊಠಡಿಗಳ ಸಂಖ್ಯೆ, ಭೂಮಿ ವಿಸ್ತೀರಣ – ಹೆಕ್ಟೇರ್‌ಗಳಲ್ಲಿ ಇತ್ಯಾದಿ.
11. ಯೋಜನೆಯ ಭೌತಿಕ – ಸಾಧನೆಯನ್ನು ಯೋಜನೆಗೆ ಅನುಗುಣವಾಗಿ ನಿಖರ ಸಂಖ್ಯೆಗಳಲ್ಲಿ ಪುರುಷ ಮತ್ತು ಮಹಿಳಾ ಫಲಾನುಭವಿಗಳ ಸಂಖ್ಯೆಯನ್ನು 2017–18 ಹಾಗೂ 2018–19ನೇ ಸಾಲಿಗೆ ಡಿಸಂಬರ್‌ವರಗೆ ನಮೂದಿಸುವುದು. ಒಂದು ವೇಳೆ ಫಲಾನುಭವಿಗಳು ಪುರುಷ ಮತ್ತು ಮಹಿಳೆ ಅಲ್ಲದೇ ಯೋಜನೆಯಲ್ಲಿ ಇತರೆ ಯಾವುದೇ ಘಟಕವಾಗಿ ನಮೂದಿಸಿದ್ದರೆ, ಅದರಂತೆಯೇ ನಮೂದಿಸುವುದು. ಉದಾಹರಣೆಗೆ: ಮನೆಗಳ ಸಂಖ್ಯೆ / ನಿರ್ಮಾಣ ಮಾಡುವ ಕೊಠಡಿಗಳ ಸಂಖ್ಯೆ, ಭೂಮಿ ವಿಸ್ತೀರಣ – ಹೆಕ್ಟೇರ್‌ಗಳಲ್ಲಿ ಇತ್ಯಾದಿ.